ಚೈತನ್ಯ ಓದು ಮುಗಿಸಿ ಬಂದಾಗ ಕಾರ್ನಾಡರ ಬಳಿಗೆ ಹೋಗಿ 'ಮುಂದೇನು ಮಾಡಬಹುದು' ಎಂದು ಸಲಹೆ ಕೇಳಿದ. ಅವರು 'ನನ್ನ ಜೊತೆಗೇ ಕೆಲಸ ಮಾಡು' ಎಂದು ಸೇರಿಸಿಕೊಂಡರು. ನಾನು ಅವತ್ತು ಕಾರಿನಲ್ಲಿ ಬರುವಾಗ ಮಗನ ಬಗ್ಗೆ ಅಷ್ಟೊಂದು ಮಾತಾಡಿದ್ದರಿಂದ ಇಂಪ್ರೆಸ್ ಆಗಿ ಕೆಲಸಕ್ಕೆ ಸೇರಿಸಿಕೊಂಡರು ಎಂದು ನನಗನಿಸುತ್ತದೆ. ಅದು ನಿಜ ಅಲ್ಲದಿರಬಹುದು, ಚೈತನ್ಯನ ಪ್ರತಿಭೆಯನ್ನು ನೋಡಿಯೇ ಅವರು ಸೇರಿಸಿಕೊಂಡಿರಬಹುದು. ಆದರೆ ನನಗೆ ಮಾತ್ರ ಹಾಗೆಯೇ ಅನಿಸುತ್ತಿತ್ತು.

ಅಷ್ಟರಲ್ಲಿ ಅವರು 'ಸ್ವರಾಜ್ ನಾಮ' ಎಂಬ ಟೀವಿ ಸೀರೀಸ್ ಮಾಡುತ್ತಿದ್ದರು. ಅದಕ್ಕೆ ವಸ್ತ್ರವಿನ್ಯಾಸ ಮಾಡಲು ನನ್ನನ್ನು ಕರೆದರು. ಚೈತನ್ಯನೇ ಅದಕ್ಕೆ ಸಹಾಯಕ ನಿರ್ದೇಶಕನಾಗಿದ್ದ. ನಾನು ಆ ಸೀರೀಸ್‌ಗೆ ವಸ್ತ್ರ ವಿನ್ಯಾಸ ಮಾಡಿದೆ. ನನ್ನ ಕೆಲಸ ಅವರಿಗೆ ತುಂಬ ಇಷ್ಟವಾಗಿತ್ತು. ನಂತರ ಅವರ 'ಅಗ್ನಿ ಮತ್ತು ಮಳೆ' ನಾಟಕವನ್ನು ಅರ್ಜುನ್ ಸಜನಾನಿ ನಿರ್ದೇಶಿಸಿದರು. ಆ ನಾಟಕಕ್ಕೆ ಕಾಸ್ಟ್ಯೂಮ್ ಎಕ್ಸಿಕ್ಯೂಟ್ ಮಾಡಲಿಕ್ಕೆ ಕರೆದರು. ಆ ನಾಟಕದಲ್ಲಿ ನಾನು ಮಾಡಿದ ಕೆಲಸವೂ ಕಾರ್ನಾಡರಿಗೆ ತುಂಬ ಇಷ್ಟವಾಗಿತ್ತು.

'ಕಾನೂರು ಹೆಗ್ಗಡಿತಿ' ಸಿನಿಮಾ ಮಾಡುವಾಗ ಪೂರ್ತಿ ಮೂರು ನಾಲ್ಕು ತಿಂಗಳು ಅವರ ಜೊತೆಯಲ್ಲಿಯೇ ಕೆಲಸ ಮಾಡಿದೆ. ನನ್ನನ್ನು ಎಲ್ಲ ಕೆಲಸಕ್ಕೂ ಕರೆಯುತ್ತಿದ್ದರು. ಸಿನಿಮಾದ ಕುರಿತ ಎಲ್ಲ ಮಾಹಿತಿಯನ್ನೂ ಆಗಾಗ ಹೇಳುತ್ತಿದ್ದರು. ಕಲಾವಿದರ ಆಡಿಷನ್‌ಗೆ ಕೂಡ ನನ್ನನ್ನು ಕರೆಯುತ್ತಿದ್ದರು. 'ಇವರು ಆ ಪಾತ್ರಕ್ಕೆ ಸರಿಹೋಗ್ತಾರಾ' ಎಂದು ಕೇಳುತ್ತಿದ್ದರು. ಎಲ್ಲರ ಅಭಿಪ್ರಾಯವನ್ನು ತೆಗೆದುಕೊಂಡು ಮುಂದುವರಿಯುತ್ತಿದ್ದರು.

ತೀರ್ಥಹಳ್ಳಿಗೆ ಲೊಕೇಶನ್‌ಗಳನ್ನು ನೋಡಲಿಕ್ಕೂ ನನ್ನ ಕರೆದುಕೊಂಡು ಹೋಗಿದ್ದರು. ಮಲೆನಾಡಿನ ಹಿರಿಯರನ್ನು ಭೇಟಿ ಮಾಡಿಸಿ 'ಆಗಿನ ಕಾಲದಲ್ಲಿ ಹೇಗಿತ್ತು ಎಂದು ಕೇಳಿ ತಿಳಿದುಕೋ' ಎಂದು ಹೇಳಿದ್ದರು. ಅವರು ಯಾವತ್ತೂ ಹೀಗೆಯೇ ಇರಬೇಕು ಎಂದು ಸ್ಪಷ್ಟವಾಗಿ ಹೇಳಿದವರಲ್ಲ. ಆದರೆ ಅವರು ಏನು ನಿರೀಕ್ಷಿಸುತ್ತಿದ್ದಾರೆ ಎಂಬುದು ಅರ್ಥ ಆಗುವ ರೀತಿ ಸಲಹೆ ಸೂಚನೆಗಳನ್ನು ಕೊಡುತ್ತಿದ್ದರು. ನಾನು ಹೆಗ್ಗಡಿತಿ ಚಿತ್ರಕ್ಕೆ ವಿನ್ಯಾಸ ಮಾಡಿದ ವಸ್ತ್ರ, ಕಲರ್ ಎಲ್ಲವೂ ಅವರಿಗೆ ಬಹಳ ಇಷ್ಟವಾಯ್ತು. ಒಂದು ಸಲ ಚಿತ್ರದ ನಾಯಕಿ ಒಂದು ಕಾಲುಗೆಜ್ಜೆ ಮಾಡಿಸಿಕೊಂಡು ಬಂದುಬಿಟ್ಟಿದ್ದರು. ನಾನು ಅದನ್ನು ನೋಡಿ 'ಇದು ಬೇಡ. ಹಳೆಯ ಕಾಲದ ಥರ ಕಾಣಿಸ್ತಾ ಇಲ್ಲ' ಎಂದೆ. ಆಗ ಅವರು 'ನನಗೆ ಗಿರೀಶ ಹೇಳಿದ್ದಾರೆ' ಎಂದರು. ನಾನು ಅವರ ಬಳಿ ಹೋಗಿ ಕೇಳಿದೆ. ಅವರು 'ನೀನು ಈ ಸಿನಿಮಾದ ವಸ್ತ್ರ ವಿನ್ಯಾಸಕಿ. ಆ ವಿಷಯದಲ್ಲಿ ನೀನು ಏನು ನಿರ್ಧಾರ ತೆಗೆದುಕೊಳ್ಳುತ್ತೀಯೋ ಅದೇ ಅಂತಿಮ. ನನ್ನನ್ನು ಕೇಳುವ ಅವಶ್ಯಕತೆಯೇ ಇಲ್ಲ. ಯಾರು ಏನೇ ತಂದಿದ್ದರೂ ರಿಜೆಕ್ಟ್ ಮಾಡು. ನನ್ನದೇನೂ ಅಭ್ಯಂತರ ಇಲ್ಲ' ಎಂದು ಹೇಳಿಬಿಟ್ಟರು. ಹೀಗೆ ಇಡೀ ತಂಡದಲ್ಲಿ ನನಗೇನೋ ದೊಡ್ಡ ಜವಾಬ್ದಾರಿ ಇದೆ. ನಾನು ತುಂಬ ಇಂಪಾರ್ಟೆಂಟ್ ಎಂದು ಅನಿಸುವ ಹಾಗೆಯೇ ಅವರು ನನ್ನನ್ನು ನೋಡಿಕೊಳ್ಳುತ್ತಿದ್ದರು.

'ಕಾನೂರು ಹೆಗ್ಗಡಿತಿ' ಸಿನಿಮಾ ಚಿತ್ರೀಕರಣಕ್ಕೆ ಸುಮಾರು ಮೂರು ತಿಂಗಳು ತೀರ್ಥಹಳ್ಳಿಯಲ್ಲಿಯೇ ಇದ್ದೆವು. ಅವರಿಗೆ ಆವಾಗಲೇ ಜ್ಞಾನಪೀಠ ಪ್ರಶಸ್ತಿ ಬಂದಿದ್ದು. ಆ ಸುದ್ದಿ ಕೇಳಿ ತೀರ್ಥಹಳ್ಳಿ ಸುತ್ತಮುತ್ತಲಿರುವ ಗೌಡರೆಲ್ಲ ಅವರನ್ನು ಊಟಕ್ಕೆ ಕರೆಯುತ್ತಿದ್ದರು. ಆದರೆ ಗಿರೀಶ ತಾವೊಬ್ಬರೇ ಹೋಗುತ್ತಿರಲಿಲ್ಲ. 'ನನ್ನ ಜೊತೆ ಇಷ್ಟು ಜನ ಇದ್ದಾರೆ' ಎಂದು ಹೇಳಿಬಿಡುತ್ತಿದ್ದರು. ಹಾಗಾಗಿ ಅವರ ಜೊತೆ ನಮ್ಮನ್ನೂ ಕರೆದು ಊಟ ಹಾಕಬೇಕಾಗುತ್ತಿತ್ತು. ಯಾವತ್ತೂ ಚಿತ್ರತಂಡದಲ್ಲಿರುವ ಎಲ್ಲರನ್ನೂ ಒಂದೇ ರೀತಿ ನೋಡುತ್ತಿದ್ದರು. ಅಡುಗೆ, ಊಟ ಎಲ್ಲವೂ ಒಂದೇ ರೀತಿ ಇರುತ್ತಿತ್ತು.

'ಕಾನೂರು ಹೆಗ್ಗಡಿತಿ' ಸಿನಿಮಾಕ್ಕೂ ಚೈತನ್ಯನೇ ಸಹಾಯಕ ನಿರ್ದೇಶಕ. ಒಂದು ಸಲ ಗಿರೀಶ 'ಈ ಸೀನ್‌ಗೆ ರೆಡಿ ಮಾಡು' ಎಂದು ಹೇಳಿ ಹೊರಟುಹೋದರು. ನಾನು ರೆಡಿ ಮಾಡಿದೆ. ಚೈತನ್ಯ ಬಂದು